**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-41/2017**

ಪಿ.ಡಬ್ಲ್ಯೂಃ- 13

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ಮೋಹನದಾಸ್ ಶೆಟ್ಟಿ |
| ತಂದೆಯ ಹೆಸರುಃ | : | ಶೇಖರ ಶೆಟ್ಟಿ |
| ವಯಸ್ಸುಃ | : | 63 ವರ್ಷ |
| ವೃತ್ತಿಃ | : | ವೈದ್ಯಾಧಿಕಾರಿಗಳು, ಆದರ್ಶ ಆಸ್ಪತ್ರೆ, ಉಡುಪಿ |
| ವಾಸಃ | : | ಉಡುಪಿ. |

**ದಿನಾಂಕಃ 09.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಈ ಸಾಕ್ಷಿದಾರರು ದೋಷಾರೋಪಣ ಪಟ್ಟಿಯಲ್ಲಿ ಸಾಕ್ಷಿದಾರರು ಆಗಿರುವುದಿಲ್ಲ. ಅಭಿಯೋಜನೆಯು ಸಿ ಆರ್ ಪಿ ಸಿ ಕಲಂ.311ರ ಅಡಿ ಅರ್ಜಿಯನ್ನು ಸಲ್ಲಿಸಿದ್ದು ಆ ಅರ್ಜಿಯ ಪುರಸ್ಕರಣೆ ಮೇರೆಗೆ ಈ ಸಾಕ್ಷಿದಾರರನ್ನು ವಿಚಾರಣೆ ಮಾಡಲು ಅಭಿಯೋಜನೆಗೆ ಅನುಮತಿ ನೀಡಲಾಗಿರುತ್ತದೆ.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಕಳೆದ 19 ವರ್ಷಗಳಿಂದ ನಾನು ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 29.11.2016 ರಂದು ಬೆಳಗಿನ ಜಾವ 1.20 ಗಂಟೆ ಸಮಯದಲ್ಲಿ ಗಾಯಾಳು ಪಾಲಾಕ್ಷ ರವರು ಒಂದು ಹಲ್ಲೆಯ ಚರಿತ್ರೆ ಬಗ್ಗೆ ಪರೀಕ್ಷೆಗಾಗಿ ಬಂದಿದ್ದರು. ಗಾಯಾಳು ಆತನಿಗೆ ದಿಃ28.11.2016ರ ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಇಬ್ಬಾಣೆ ಗ್ರಾಮದಲ್ಲಿ ಹಲ್ಲೆ ನಡೆಸಲಾಗಿತ್ತು ಎಂದು ತಿಳಿಸಿದ. ಗಾಯಾಳು ಪಾಲಾಕ್ಷ ಆತನನ್ನು ಮಲ್ಲಿಕಾರ್ಜುನ, ಓಂಕಾರ, ರವಿ, ಪರಮೇಶ, ವಿಶಾಲಾಕ್ಷಿ ಎಂಬ ಐದು ಜನರು ಹಲ್ಲೆ ನಡೆಸಿದ್ದರು ಎಂದು ತಿಳಿಸಿದ. ಗಾಯಾಳುವನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದವು.

1. ಗಾಯಾಳುವಿನ ತಲೆಯ ಮೇಲೆ 6.5 ಸೆಂ ಮಿ ವಿಸ್ತಾರದ ಒಂದು ಹೊಲಿಗೆ ಹಾಕಿದ ಗಾಯ ಇರುವುದು ಕಂಡು ಬಂತು.

2. ಗಾಯಾಳುವಿನ ಬಲ ತೋಳಿನ ಮೇಲೆ, ಎಡಮುಂಗೈ ಮೇಲೆ, ಎಡತೋಳಿನ ಮೇಲೆ, ಎಡಮೊಣಕಾಲಿನ ಮೇಲೆ ಹಾಗೂ ಎಡ ತೊಡೆಯ ಮೇಲೆ, ಬಲಭುಜದ ಮೇಲೆ, ಬಲ ಮೊಣಕಾಲಿನ ಮೇಲೆ ತರಚಿದ ಗಾಯ ಇರುವುದು ಕಂಡು ಬಂತು.

3. ಗಾಯಾಳುವಿಗೆ ಆಗಿದ್ದ ಗಾಯಗಳು ಪರೀಕ್ಷೆಗಿಂತ 16 ರಿಂದ 18 ಗಂಟೆಯ ಪೂರ್ವದಲ್ಲಿ ಸಂಭವಿಸಿದ ಗಾಯಗಳು ಆಗಿದ್ದವು. ದೊಣ್ಣೆಯಿಂದ ಹೊಡೆದಲ್ಲಿ ಮೇಲೆ ಕಾಣಿಸಿದ ಗಾಯಗಳು ಸಂಭವಿಸುವ ಸಾಧ್ಯತೆ ಇರುತ್ತವೆ. ಗಾಯಾಳು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿರುತ್ತದೆ. ಗಾಯಾಳುವಿನ ಚಿಕಿತ್ಸೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಸಾಕ್ಷಿದಾರರು ಗುರುತಿಸಿದ ಗಾಯಾಳುವಿನ

ಗಾಯದ ಪ್ರಮಾಣಪತ್ರವನ್ನು ನಿಪಿ–16 ಎಂದು, ಗಾಯಾಳುವಿನ ಡಿಸ್ ಚಾರ್ಜ್ ಸಮ್ಮರಿಯನ್ನು ನಿಪಿ–17 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿಎನ್ ವಿ ವಕೀಲರಿಂದಃ**

4. ಗಾಯಗಳ ಬಣ್ಣದ ಆಧಾರದ ಮೇಲೆ ಗಾಯಗಳ ವಯಸ್ಸನ್ನು ನಾನು ಹೇಳಿರುತ್ತೇನೆ. ಗಾಯಾಳುವಿನ ಗಾಯಗಳು ಕೆಂಪುಬಣ್ಣದಿಂದ ಕೂಡಿದ್ದವು ಎನ್ನುವ ಬಗ್ಗೆ ನಾನು ತಿಳಿಸಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಪೊಲೀಸರು ನನಗೆ ನ್ಯಾಯಾಲಯದ ಮುಂದಿರುವ ದೊಣ್ಣೆಗಳನ್ನು ಪರೀಕ್ಷೆಗಾಗಿ ಕಳುಹಿಸಿ ನನ್ನ ಅಭಿಪ್ರಾಯ ಪಡೆದಿಲ್ಲ. ಗಾಯಾಳುವನ್ನು ಆಸ್ಪತ್ರೆಗೆ ದಾಖಲ್ಮಾಡಿಕೊಂಡು ಅದೇ ದಿನ ಬಿಡುಗಡೆ ಸಹ ಮಾಡಲಾಗಿರುತ್ತದೆ. ಗಾಯಾಳುವಿಗೆ ಆಗಿದ್ದ ಗಾಯಗಳು ಯಾವ ಸ್ವರೂಪದ ಗಾಯಗಳು ಎಂದು ನಾನು ನಮೂದಿಸಿಲ್ಲ. ನನ್ನ ಅಭಿಪ್ರಾಯದಲ್ಲಿ ಗಾಯಾಳುವಿಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದವು. ಓರ್ವ ವ್ಯಕ್ತಿ ಗಟ್ಟಿಯಾದ ನೆಲದ ಮೇಲೆ ಬಿದ್ದಲ್ಲಿ ಸಹ ಗಾಯಾಳುವಿಗೆ ಆಗಿದ್ದ ಗಾಯಗಳು ಸಂಭವಿಸಬಹುದಾದ ಸಾಧ್ಯತೆಗಳು ಇರುತ್ತವೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.